# ಎಲ್ಲರ ಕಥೆಯಾದ 'ನನ್ನ ಕಥೆ'

ಇತ್ತೀಚೆಗೆ ನಾನು ಓದಿದ ಪುಸ್ತಕಗಳಲ್ಲಿ ಪ್ರಿಯವಾದವು ಹಲವು. ವಿನೋದ್ ಮೆಹ್ತಾ ಅವರ 'ಲಖನೌ ಹುಡುಗ', ಬಿಳಿಮಲೆಯವರ 'ಕನ್ನಡ ಕಥನಗಳು', ಕೃಷ್ಣಮೂರ್ತಿ ಹನೂರ ಅವರ 'ಕಾಲು ದಾರಿಯ ಕಥನಗಳು' – ಹೀಗೆ ಪಟ್ಟಿ ಮುಂದುವರಿಯುತ್ತದೆ. ಆದರೆ, ಪಂಡಿತ ಚನ್ನಪ್ಪ ಎರೇಸೀಮೆಯವರ ಆತ್ಮಕಥನ 'ನನ್ನ ಕಥೆ'ಯ ಬಗ್ಗೆ ಬರೆಯಬೇಕು ಅನ್ನಿಸಿದ್ದು, ಅನೇಕರು ಇದನ್ನು ಗಮನಿಸದೆಯೇ ಇರಬಹುದು ಎನ್ನುವ ಕಾರಣಕ್ಕೆ.

ಆತ್ಮಕತೆ ಪ್ರಕಾರಕ್ಕೇ ಹೊಸ ವಿಸ್ತಾರ ಒದಗಿಸಬಲ್ಲಷ್ಟು ಇದು ಶಕ್ತಿಶಾಲಿಯಾಗಿದೆ. ಇದೊಂದು 'ಕಾಲಧರ್ಮದ ಕಥನ'ವಾಗಿಯೂ 'ಸಾಂಸ್ಕೃತಿಕ ಕಥನ'ವಾಗಿಯೂ ಮಹತ್ವದ್ದಾಗಿದೆ. ಸಾಮಾನ್ಯವಾಗಿ ಯಶೋಗಾಥೆಗಳಾಗಿ, ಆತ್ಮಪ್ರತ್ಯಯದಲ್ಲೇ ಮುಳುಗೇಳುವ ಆತ್ಮಕಥನಗಳೇ ಹೆಚ್ಚು. 'ನಾನು'ವಿನ ಸುತ್ತಲೇ ಮಿಕ್ಕೆಲ್ಲವನ್ನೂ ಹೆಣೆಯಲಾಗುತ್ತದೆ. ಆದರೆ ಚೆನ್ನಪ್ಪ ಎರೆಸೀಮೆಯವರ ಆತ್ಮಕತೆ ಮಾತ್ರ, ಲೋಕದೊಂದಿಗೆ ತನ್ನನ್ನು ಹೆಣೆದುಕೊಳ್ಳಲು ಪ್ರಯತ್ನಿಸುತ್ತದೆ. ಹೀಗಾಗಿ ಇದು 'ನನ್ನ ಕಥೆ' ಎಂದಿದ್ದರೂ ನನ್ನನ್ನು ರೂಪಿಸಿದ, ನಿರ್ದೇಶಿಸಿದ, ನಾನು ಪ್ರಭಾವಿತನಾದ, ನಾನು ಕಷ್ಟಪಟ್ಟ – ಹೀಗೆ ಲೋಕಾಂತದ ಕಥನವಾಗುತ್ತಾ ಹೋಗುತ್ತದೆ. ಆತ್ಮಕಥೆಯೆನ್ನುವುದು ಸೋಲೋ ಆಗಬೇಕಾಗಿಲ್ಲ, ಆಗಕೂಡದು, ಅದು ಸಮಷ್ಟಿಯೊಂದಿಗೆ ಅಖಂಡವಾಗಿ ಬೆರೆತಾಗ ಅದಕ್ಕೆ ಸಹಜವಾಗಿಯೇ ವಿನಯವೂ, ಆತ್ಮವಿಮರ್ಶೆಯ ಗುಣವೂ ಪ್ರಾಪ್ತವಾಗುತ್ತದೆ ಎನ್ನುವುದಕ್ಕೆ ಇದೊಂದು ಮಾದರಿಯಾಗಿದೆ.




ನನ್ನ ಕಥೆ
ಲೇ: ಪಂಡಿತ ಚನ್ನಪ್ಪ ಎರೇಸೀಮೆ
ಪ್ರ: ಪಂಡಿತ ಚನ್ನಪ್ಪ ಎರೇಸೀಮೆ ಜನ್ಮಶತಮಾನೋತ್ಸವ ಸಮಿತಿ, ವಿಜಯನಗರ, ಬೆಂಗಳೂರು

ಬಯಲುಸೀಮೆಯ ಕೆಳಮಧ್ಯಮ ವರ್ಗಕ್ಕೆ ಸೇರಿದ ಹುಡುಗನೊಬ್ಬ ವಿದ್ಯೆ, ಉದ್ಯೋಗ, ಸಾಮಾಜಿಕ ಮನ್ನಣೆ, ಪಾಂಡಿತ್ಯ ಈ ಎಲ್ಲದಕ್ಕೂ ಹಾತೊರೆದ, ನೂರೆಂಟು ಕಷ್ಟಕೋಟಲೆಗಳು, ಏಳುಬೀಳುಗಳ ನಡುವೆ ಅವುಗಳನ್ನು ಪಡೆದ ಕಥನವಾಗುತ್ತಲೇ ಇದು ಇನ್ನೂ ಅನೇಕ ಮಹತ್ವದ ಸಂಗತಿಗಳನ್ನು ಅನಾಯಾಸವಾಗಿ ಸಾಧಿಸಿಕೊಂಡಿದೆ. ಆ ಕಾಲದ ಆಹಾರಾಭ್ಯಾಸಗಳಿಂದ ಹಿಡಿದು, ಉಡುಪು, ಹಬ್ಬ ಹರಿದಿನಗಳು, ಸಾಂಸ್ಕೃತಿಕ ಆಚರಣೆಗಳು, ಜೀವನಕ್ರಮದಲ್ಲಾಗುತ್ತಿದ್ದ ಪಲ್ಲಟಗಳು, ಇವುಗಳನ್ನು ಪರಿಣಾಮಕಾರಿಯಾದ ಶಬ್ದಚಿತ್ರಗಳಲ್ಲಿ ಹಿಡಿದಿಡುತ್ತಾರೆ. ಆ ವಿವರಗಳು, ಉದಾಹರಣೆಗೆ ಚಟ್ನಿ ಹೇಗೆ ಮಾಡುತ್ತಿದ್ದರು ಎನ್ನುವುದರಿಂದ ಹಿಡಿದು, ಕಾಫಿ ಹೇಗೆ ಹಳ್ಳಿಗಳನ್ನು ಪ್ರವೇಶಿಸಿತು, ಬಗಲುಗಸೆ ಅಂಗಿಯನ್ನು ಹೇಗೆ ತಯಾರಿಸಲಾಗುತ್ತಿತ್ತು, ಹೆಣ್ಣುಮಕ್ಕಳ ಸ್ಥಿತಿಗತಿಗಳು ಹೇಗಿದ್ದವು, ಉದ್ಯೋಗಗಳನ್ನು ಯಾವ ಆಧಾರದ ಮೇಲೆ ಕೊಡುತ್ತಿದ್ದರು, ಕಾವ್ಯಾಭ್ಯಾಸ ಹೇಗೆ ನಡೆಯುತ್ತಿತ್ತು ಎನ್ನುವ ಎಲ್ಲ ವಿವರಗಳನ್ನೂ ಕಾದಂಬರಿಕಾರನ ತನ್ಮಯತೆಯಲ್ಲಿಯೂ ಚಿತ್ರಕಾರನ ಬಣ್ಣಗಳಲ್ಲಿಯೂ ಎರೇಸೀಮೆಯವರು ಕಟ್ಟಿ ಕೊಡುತ್ತಾರೆ.